

# ಪ್ರಿಯಾ ಓ ಪ್ರಿಯಾ..

ಪ್ರಿಯಾ ವಾಸುದೇವ ಮಣಿ ಅಯ್ಯರ್ ಎಂದರೆ ಥಟ್ಟನೆ ಗುರುತು ಸಿಗುವುದು ಕಷ್ಟ. ಸರಳವಾಗಿ ಪ್ರಿಯಾಮಣಿ ಅನ್ನಿ, ಸಿನಿರಸಿಕರ ಮುಖದಲ್ಲಿ ಮಂದಹಾಸವೊಂದು ಸುಳಿದುಹೋಗುತ್ತದೆ. ಎಲ್ಲಿಯ ಅಯ್ಯರ್ ಹುಡುಗಿ, ಎಲ್ಲಿಯ ಈ ಮಿಂಚುಳ್ಳಿ! ಸಿನಿಮಾದ ಜಾದೂ ಇರುವುದೇ ಈ ವೈರುಧ್ಯದಲ್ಲಿ. ಆ ಜಿಜ್ಞಾಸೆ ಬದಿಗಿರಲಿ; ಪಾದರಸದಂಥ ಈ ಚೆಲುವೆ ಕನ್ನಡಕ್ಕೆ ಆಗ ಬಂದಾಳು, ಇದೋ ಬಂದಳು ಎಂದು ಗಾಂಧಿನಗರದಲ್ಲಿ ವದಂತಿ ವರ್ಷಗಳಿಂದ ಹರಡುತ್ತಲೇ ಇತ್ತು. ಅದು ನಿಜವಾದದ್ದು 'ರಾಮ್' ಮೂಲಕ.

ಪುನೀತ್ ಅಭಿನಯದ 'ರಾಮ್' ಚಿತ್ರದಲ್ಲಿ ಪ್ರಿಯಾಮಣಿ ನಾಯಕಿ. 'ಹೊಸ ಗಾನಬಜಾನಾ' ಎಂದು 'ರಾಮ್'ನಲ್ಲಿ ಪುನೀತ್‌ಗೆ ಸಮನಾಗಿ ಪ್ರಿಯಾಮಣಿ ಕುಣಿದು ಕುಪ್ಪಳಿಸಿದ್ದಾಳೆ. ಹೇಗೆ ಸಾಧ್ಯವಾಯಿತು ಈ ಹುಮ್ಮಸ್ಸು ಎಂದರೆ– 'ಕುಣಿಯೋದು ನಂಗಿಷ್ಟ' ಎನ್ನುವುದು ಪ್ರಿಯಾಮಣಿ ಉತ್ತರ.

ತಮಿಳು ಬೇರಿನ ಪ್ರಿಯಾಮಣಿ ಹುಟ್ಟಿದ್ದು ಕೇರಳದಲ್ಲಿ. ಬೆಳೆದದ್ದು ಬೆಂಗಳೂರಿನಲ್ಲಿ. ನಟಿಯಾಗಿ ಹೆಸರು ಗಳಿಸಿದ್ದು ತೆಲುಗು, ತಮಿಳು ಚಿತ್ರಗಳಲ್ಲಿ. ತಮಿಳುನಾಡಿಗೆ ಹೋಗಿ– ಅಲ್ಲಿ ತಮಿಳು ಚಿತ್ರರಸಿಕರಿಗೆ ಪಕ್ಕದ ಮನೆ ಹುಡುಗಿ ಎನ್ನುವಷ್ಟು ಹತ್ತಿರ. ಆಂಧ್ರದಲ್ಲಿ ತೆಲುಗು ಅಮ್ಮಾಯಿ. ಇಂತಿಪ್ಪ ಪ್ರಿಯಾಮಣಿ ಕನ್ನಡ, ತೆಲುಗು, ತಮಿಳು, ಮಲೆಯಾಳಿಗಳನ್ನು ಸಲೀಸಾಗಿ ಮಾತನಾಡಬಲ್ಲ ಜಾಣೆ. ಹಾಗಾಗಿ, ಈಕೆಯನ್ನು ದಕ್ಷಿಣ ಭಾರತದ ಸಂಸ್ಕೃತಿಯ ಕೊಲಾಜ್ ಅನ್ನಬಹುದು.

ಪ್ರಿಯಾ ಒಂದಷ್ಟು ಜಾಹಿರಾತುಗಳಿಗೆ ರೂಪದರ್ಶಿ ಆದದ್ದುಂಟು. ಆನಂತರ ಸಿನಿಮಾ ಕನಸುಗಳಲ್ಲಿ ಮುಳುಗಿ, ಕನ್ನಡ ಚಿತ್ರಗಳಲ್ಲಿ ಅವಕಾಶ ಹುಡುಕಿದ್ದುಂಟು. ಆದರೆ ಕನ್ನಡ ಮಾತನಾಡುವ ಹುಡುಗಿಯ ಬಗ್ಗೆ ಉದ್ಯಮ ಅಷ್ಟಾಗಿ ಆಸಕ್ತಿ ತೋರಲಿಲ್ಲ. ಇದಕ್ಕೆ ಪ್ರತಿಯಾಗಿ ತೆಲುಗು, ತಮಿಳುಗಳಿಂದ ಅವಕಾಶಗಳು ಹುಡುಕಿಕೊಂಡು ಬಂದವು. ತೆಲುಗಿನಲ್ಲಿ 'ಪೆಳ್ಳೈನ ಕೊತ್ತಲೋ' ಹಾಗೂ 'ಯಮದೊಂಗ' ಚಿತ್ರಗಳು ದೊಡ್ಡ ಯಶಸ್ಸು ಗಳಿಸಿದ್ದೇ ತಡ ಪ್ರಿಯಾ ತಾರೆಯಾಗಿಬಿಟ್ಟರು. ತಮಿಳಿನ 'ಪರುಥಿ ವೀರನ್' ಚಿತ್ರದಲ್ಲಿನ ನಟನೆಗಾಗಿ ರಾಷ್ಟ್ರಪ್ರಶಸ್ತಿ, ಫಿಲ್ಮ್‌ಫೇರ್ ಪ್ರಶಸ್ತಿಗಳು ಸಂದವು. ಈ ಮೂಲಕ ಪ್ರತಿಭಾವಂತೆ ಎನ್ನುವ ಮೆಚ್ಚುಗೆಗೆ ಪ್ರಿಯಾಮಣಿ ಪಾತ್ರರಾದರು.

ತಮಿಳು, ತೆಲುಗಿನಲ್ಲಿ ವರ್ಚಸ್ಸು ಏರುಗತಿಯಲ್ಲಿರುವಾಗ ಕನ್ನಡದ ನಿರ್ಮಾಪಕರು ಪ್ರಿಯಾಳನ್ನು ಎಡತಾಕಿದ್ದುಂಟು. ಶಿವರಾಜಕುಮಾರ್, ಗಣೇಶ್, ದರ್ಶನ್, ಸುದೀಪ್‌ರ ಚಿತ್ರಗಳಿಗೆ ನಾಯಕಿಯಾಗುವಂತೆ ಆಕೆಯನ್ನು ಕೇಳಿದ್ದುಂಟು. ಆದರೆ ಡೇಟ್ಸ್ ಹೊಂದಾಣಿಕೆಯಾಗಲಿಲ್ಲ. ಕಾಲ ಕೂಡಿ ಬಂದದ್ದು 'ರಾಮ್' ಮೂಲಕ. ಇದರಿಂದಾಗಿ ದಕ್ಷಿಣದ ನಾಲ್ಕೂ ಪ್ರಮುಖ ಭಾಷೆಗಳ ಚಿತ್ರಗಳಲ್ಲಿ ಪ್ರಿಯಾ ಕಾಣಿಸಿಕೊಂಡಂತಾಯಿತು.



ದಕ್ಷಿಣದ ಈ ಚೆಲುವೆ ಹಿಂದಿ ಚಿತ್ರದತ್ತಲೂ ಮುಖ ಮಾಡಿದ್ದಾಳೆ. ದಕ್ಷಿಣದ ತಾರಾ ವರ್ಚಸ್ಸಿನ ನಿರ್ದೇಶಕ ಮಣಿರತ್ನಂ ಹಿಂದಿಯಲ್ಲಿ ರೂಪಿಸುತ್ತಿರುವ 'ರಾವಣ್' ಚಿತ್ರದ ನಾಯಕಿ ಈ ರಮಣಿಯೇ. 'ರಾವಣ' ತಮಿಳಿನಲ್ಲೂ ನಿರ್ಮಾಣವಾಗುತ್ತಿದೆ. 'ಶಂಭೋ ಶಿವ ಶಂಭೋ' ಪ್ರಿಯಾ ಒಪ್ಪಿಕೊಂಡಿರುವ ಹೊಸ ತೆಲುಗು ಚಿತ್ರ.

ಶಿವರಾಜ್ ನಾಯಕತ್ವದ 'ಭಾಗ್ಯದ ಬಳೆಗಾರ' ಚಿತ್ರಕ್ಕೆ ಮೊದಲು ಸಂಪರ್ಕಿಸಿದ್ದು ಪ್ರಿಯಾಮಣಿ ಅವರನ್ನೇ. ಕಡಿಮೆ ಸಂಭಾವನೆ ಕಾರಣದಿಂದಾಗಿ ಅವರು ಬಳೆಗಾರನನ್ನು ಒಪ್ಪಿಕೊಳ್ಳಲಿಲ್ಲ ಎನ್ನುವ ಮಾತಿದೆ. ಇದನ್ನು ಸಾರಾಸಗಟಾಗಿ ತಳ್ಳಿಹಾಕುವ ಅವರು ಹೇಳುವುದು– 'ಮೊದಲು ಪಾತ್ರ, ಆಮೇಲೆ ಸಂಭಾವನೆ ವಿಷಯ. ಪಾತ್ರವೊಂದನ್ನು ಒಪ್ಪಿಕೊಳ್ಳಲು ಸಂಭಾವನೆಯೊಂದೇ ಮಾನದಂಡವಲ್ಲ. ಬಳೆಗಾರ ಚಿತ್ರದ ಪಾತ್ರ ಇಷ್ಟವಾಗಲಿಲ್ಲ. ಆ ಕಾರಣದಿಂದಾಗಿ ತಿರಸ್ಕರಿಸಿದೆ'. ಒಳ್ಳೆಯ ಅವಕಾಶಗಳು ಯಾವ ಭಾಷೆಯಲ್ಲಿ ದೊರೆತರೂ ಅಭಿನಯಿಸಲು ಸಿದ್ಧ ಎನ್ನುವುದು ಪ್ರಿಯಾ ನಿಲುವು.

'ರಾಮ್' ನಂತರ ಕನ್ನಡದಲ್ಲಿ ಪ್ರಿಯಾಳ ದರ್ಶನ ಮತ್ತೆ ಯಾವಾಗ? ಸದ್ಯದಲ್ಲೇ ಮತ್ತೊಂದು ಚಿತ್ರ ಸಾಧ್ಯವಾಗಬಹುದು ಎನ್ನುವುದು ಪ್ರಿಯಾ ನಿರೀಕ್ಷೆ. ಗಣೇಶ್ ನಾಯಕತ್ವದ ಚಿತ್ರವೊಂದರಲ್ಲಿ ಅಭಿನಯಿಸುವ ಕುರಿತು ಮಾತುಕತೆ ಚಾಲ್ತಿಯಲ್ಲಿದೆಯಂತೆ.

■ ರಚಹ